# ಸಂಪಾದಕೀಯ

## ಅಹಂತತ್ತ್ವ

### ಮಾನವನ ಅಧ್ಯಯನ

**ಮಾನವ** ವ್ಯಕ್ತಿತ್ವವೆನ್ನುವುದು ಅತ್ಯಂತ ಸಂಕೀರ್ಣವಾದುದು. ಅನೇಕ ವಿರುದ್ಧಾಂಶಗಳಿಂದ, ಅಸಂಖ್ಯ ಕ್ರಿಯೆಗಳಿಂದ ಕೂಡಿರುವ ಅದನ್ನು ಅರ್ಥ ಮಾಡಿಕೊಳ್ಳುವುದು ದುಸ್ಸಾಧ್ಯ. ಅದರ ವೈವಿಧ್ಯಮಯ ವರ್ತನೆ, ಮತಿ ಭ್ರಮಣೆಯನ್ನು ಉಂಟುಮಾಡುತ್ತದೆ. ಅದರಲ್ಲುಂಟಾಗುವ ಸುಖ ದುಃಖಗಳ ಹೊಯ್ದಾಟ, ಒಳಿತು ಕೆಡುಕುಗಳ ಕಾದಾಟ, ಇಹಪರಗಳ ಸೆಣಸಾಟ, ಅನೇಕಾನೇಕ ಏರುಪೇರುಗಳು, ವೈಪರೀತ್ಯಗಳು—ಎಲ್ಲವನ್ನೂ ನೋಡುತ್ತಾ ಹೋದರೆ ನಮಗೆ ದಿಗ್ಭ್ರಮೆಯುಂಟಾಗುತ್ತದೆ. ಈ ವ್ಯಕ್ತಿತ್ವವನ್ನು ಅಧ್ಯಯನ ಮಾಡುತ್ತ ಹೋದಷ್ಟೂ ರಹಸ್ಯ ಇನ್ನೂ ಆಳವಾಗುತ್ತ ಹೋಗುತ್ತದೆ. ಆದರೂ ಅಧ್ಯಯನ ಮುಂದುವರಿಯುತ್ತದೆ. ಥಾಮಸ್ ಕಾರ್ಲೈಲ್ (Thomas Carlyle) ಹೇಳುವಂತೆ, "ಮಾನವನಲ್ಲಿ ನರಕದ ತಳಾತಳವನ್ನು ಮುಟ್ಟುವ ಆಳಗಳಿವೆ, ಸ್ವರ್ಗದ ತುಟ್ಟ ತುದಿಯನ್ನು ತಾಕುವ ಔನ್ನತ್ಯಗಳಿವೆ. ಏಕೆಂದರೆ ಸ್ವರ್ಗನರಕ ಗಳೆರಡನ್ನೂ ಅವನೇ ತಾನೆ ಸೃಷ್ಟಿಸಿದವನು? ಅವನೊಂದು ಶಾಶ್ವತ ಪವಾಡ ಮತ್ತು ಪರಮ ರಹಸ್ಯ."

> "ಜೀವನವೆನ್ನುವುದು ಬಾಳಿ ಅನುಭವಿಸಬೇಕಾದ ಒಂದು ರಹಸ್ಯ, ಪರಿಹರಿಸಬೇಕಾದ ಸಮಸ್ಯೆಯಲ್ಲ."

ಅನಾದಿ ಕಾಲದಿಂದಲೂ ಮಾನವನ ಅಧ್ಯಯನ ನಡೆಯುತ್ತಲೇ ಇದೆ. ಜಗತ್ತಿನ ಅತಿಶ್ರೇಷ್ಠ ಚಿಂತಕರು ತಮ್ಮ ಅತ್ಯುತ್ತಮ ಸಮಯವನ್ನು ಇದಕ್ಕೆ ವಿನಿಯೋಗಿಸಿರುವರು, ಈ ಕಗ್ಗಂಟನ್ನು ಬಿಡಿಸಲು ತಮ್ಮ ಮಾನಸಿಕ ಶಕ್ತಿಯನ್ನೆಲ್ಲ ಧಾರೆಯೆರೆದಿರುವರು. ಅನೇಕ ಅನುಭಾವಿಗಳು ಈ ರಹಸ್ಯವನ್ನು ಬಗೆಹರಿಸಲು ಜೀವನ ಪರ್ಯಂತ ಸಾಧನೆಗೈದಿರುವರು. ಸಾವಿರಾರು ಗ್ರಂಥಗಳು ಅವನ ಬಗ್ಗೆ ಬರೆಯಲ್ಪಟ್ಟಿವೆ. ಲಕ್ಷಾಂತರ ಉಪನ್ಯಾಸ, ಪ್ರವಚನಗಳು ಅವನನ್ನು ಕುರಿತಾಗಿ ನಡೆದಿವೆ. ಅವನ ಅಧ್ಯಯನಕ್ಕೆ ಸಂಬಂಧಿಸಿದಂತೆ ಅನೇಕ ಕಾರ್ಯಾಗಾರಗಳು ನಡೆದಿವೆ. ಅವನ ಅಧ್ಯಯನದ ಈ ಪ್ರಯತ್ನದಲ್ಲಿ ಮನಶ್ಶಾಸ್ತ್ರವೇ ಮುಂತಾದ ಎಷ್ಟೋ ವಿಜ್ಞಾನಗಳು ಹುಟ್ಟಿಕೊಂಡಿವೆ. ಆದರೂ ಈ ರಹಸ್ಯ ರಹಸ್ಯವಾಗಿಯೆ ಉಳಿದಿದೆ. ಕೆಲವರು ಮಾನವನು ಭಗವತ್ ಸ್ವರೂಪ ಎನ್ನುತ್ತಾರೆ, ಕೆಲವರು ಅವನು ಆಲೋಚಿಸುವ ಪ್ರಾಣಿ ಎನ್ನುತ್ತಾರೆ, ಮತ್ತೆ ಕೆಲವರು ಅವನು ನೈತಿಕ ಪ್ರಾಣಿ ಎನ್ನುತ್ತಾರೆ, ಇನ್ನು ಕೆಲವರು ಅವನು ಜಗತ್ತಿನಲ್ಲಿಯೇ ಅತ್ಯಂತ ಕ್ರೂರ ಪಶು ಎನ್ನುತ್ತಾರೆ. ಹೀಗೆ ಕೊನೆಯಿಲ್ಲದೆ ಅವನನ್ನು ಕುರಿತ ವಿಶ್ಲೇಷಣೆಗಳು ನಡೆಯುತ್ತಾ ಬಂದಿವೆ.

ಆದರೂ ಈ ಅಧ್ಯಯನವನ್ನು ನಾವು ನಿಲ್ಲಿಸುವಂತಿಲ್ಲ. ಈ ರಹಸ್ಯವೇ ನಮ್ಮನ್ನು ಈ ಅಜ್ಞಾತ ಪಥದಲ್ಲಿ ಮುಂದುವರಿಯುವಂತೆ ಪ್ರೇರೇಪಿಸುತ್ತದೆ. ಇದರಿಂದ ನಮಗ ದೊರಕುವ ತಥ್ಯಾಂಶಗಳು ನಮ್ಮ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಸಹಾಯಕವಾಗುತ್ತವೆ.

ಮಾನವ ಅಧ್ಯಯನದ ಒಂದು ಅತ್ಯಂತ ಮುಖ್ಯವಾದ ಅಂಶವೆಂದರೆ ಅಹಂಪ್ರತ್ಯಯದ ಅಧ್ಯಯನ. ನಮ್ಮ ದೈನಂದಿನ ಜೀವನದಲ್ಲಿ ಅಹಂನ ಪಾತ್ರ ಅತ್ಯಂತ ಪ್ರಧಾನವಾದುದು. ಅದು ನಮ್ಮ ಜೀವನದ ಪ್ರತಿಯೊಂದು ಆಗುಹೋಗುಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಆಕ್ರಮಿಸುತ್ತದೆ. ಎಲ್ಲ ಕ್ರಿಯೆಗಳ ಹಿಂದೆ ಮತ್ತು ಎಲ್ಲ ಆಲೋಚನೆಗಳ ಹಿಂದೆ ಅದರ ತೆರೆಮರೆಯ ಪಾತ್ರವನ್ನು ಗುರುತಿಸಬಹುದು. ಈ ಆತ್ಮವಿಶ್ಲೇಷಣೆಯ ಮೂಲಕ ನಮ್ಮನ್ನು ನಾವು ಸರಿಪಡಿಸಿಕೊಳ್ಳಬಹುದು. 'ಸತ್ಯದ ಬಗೆಗಿನ ನಮ್ಮ ಕಲ್ಪನೆ ನಮ್ಮ ಬಗೆಗಿನ ಕಲ್ಪನೆಯನ್ನು ಅವಲಂಬಿಸಿರುತ್ತದೆ' ಎಂಬ ಅತಿ ಮುಖ್ಯವಾದ ತತ್ತ್ವವಿದೆ. ಹಾಗೆಯೇ ನಮ್ಮ ಬಗೆಗಿನ ನಮ್ಮ ಕಲ್ಪನೆ ನಮ್ಮ ಬಗೆಗಿನ ನಮ್ಮ ತಿಳುವಳಿಕೆಯನ್ನು ಅವಲಂಬಿಸಿರುತ್ತದೆ. ಅಹಂಪ್ರತ್ಯಯದ ಅಧ್ಯಯನ ನಮ್ಮ ಬಗೆಗಿನ ನಮ್ಮ ತಿಳಿವಳಿಕೆಯನ್ನು ಹೆಚ್ಚಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

### ಅಹಂಪ್ರತ್ಯಯದ ವಿಕಾಸ

ಈ ಅಹಂಪ್ರತ್ಯಯವು ಮಾನವನಿಗೆ ಸಂಬಂಧಿಸಿದುದು, ಅಷ್ಟೇ ಅಲ್ಲದೆ ಅದು ವ್ಯಕ್ತಿಪ್ರಜ್ಞೆಯನ್ನು ಅವಲಂಬಿಸಿದೆ. ಈ ವ್ಯಕ್ತಿಪ್ರಜ್ಞೆಯೇ ಅಹಂಪ್ರತ್ಯಯ ಎಂದರೂ ತಪ್ಪೇನಿಲ್ಲ. ತಾನು ತನ್ನದು ಎಂಬ ಈ ತನ್ನತನವನ್ನು ಅಥವಾ ವ್ಯಕ್ತಿಪ್ರಜ್ಞೆಯನ್ನು ಭೌತವಸ್ತುಗಳ ಮೇಲೆ ನಾವು ಆರೋಪಿಸಲಾಗುವುದಿಲ್ಲ. ಪ್ರತಿಯೊಂದು ವಸ್ತುವಿನಲ್ಲಿಯೂ ತನ್ನದೇ ಆದ ಪ್ರತ್ಯೇಕ ವೈಶಿಷ್ಟ್ಯವಿದ್ದರೂ, ಎಲ್ಲ ವಸ್ತುಗಳು ಪ್ರತ್ಯೇಕ ಪ್ರತ್ಯೇಕವಾಗಿ ಕಂಡರೂ ಅವುಗಳಲ್ಲಿ ತಮ್ಮದೇ ಆದ ವ್ಯಕ್ತಿಪ್ರಜ್ಞೆ ಇರುವುದಿಲ್ಲ, ಅವು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಭಾವಿಸಲಾರವು. ಅವು 'ನಾನು' ಎಂಬ ಭಾವವನ್ನು ಹೊಂದಿರುವುದಿಲ್ಲ. ಆದ್ದರಿಂದಲೇ ಅವುಗಳ ಮೇಲೆ ನಾವು ಯಾವ ವ್ಯಕ್ತಿತ್ವವನ್ನೂ ಆರೋಪಿಸುವುದಿಲ್ಲ. ಯಂತ್ರಗಳು ಅದ್ಭುತ ಕಾರ್ಯವನ್ನು ಮಾಡುತ್ತವೆಯಾದರೂ ಅವುಗಳಲ್ಲಿ ಅಹಂಪ್ರಜ್ಞೆ ಇಲ್ಲದಿರುವುದರಿಂದ ಅವಕ್ಕೆ ಯಾವ ವ್ಯಕ್ತಿತ್ವವೂ ಇಲ್ಲ.

ಸಸ್ಯಗಳಲ್ಲಿ ಜೀವಶಕ್ತಿ ಎದ್ದು ಕಾಣುತ್ತದೆ. ಅವು ತಮ್ಮನ್ನು ತಾವು ವೃದ್ಧಿಸಿಕೊಳ್ಳುತ್ತವೆ, ಅವುಗಳಲ್ಲೆಲ್ಲ ಪ್ರತ್ಯೇಕ ಜೀವನ ಸೂತ್ರ ಇರುವುದು ಕಂಡುಬರುತ್ತದೆ. ಆದರೆ ಅವುಗಳಲ್ಲೂ ಕೂಡ ಅಹಂಪ್ರಜ್ಞೆ ಇರುವುದು ನಮಗೆ ಸ್ಪಷ್ಟವಾಗಿ ಕಂಡುಬರುವುದಿಲ್ಲ. ಆದ್ದರಿಂದಲೇ ಅವುಗಳ ಮೇಲೆಯೂ ನಾವು ವ್ಯಕ್ತಿತ್ವವನ್ನು ಆರೋಪಿಸುವುದಿಲ್ಲ.

ಪ್ರಾಣಿಜಗತ್ತಿನಲ್ಲಿ ಜೀವಶಕ್ತಿ ಇನ್ನೂ ಹೆಚ್ಚು ಅಭಿವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ಅವು ಚಿಂತಿಸಬಲ್ಲವು, ಭಾವಿಸಬಲ್ಲವು. ಸುಖ ದುಃಖಗಳನ್ನು ಅನುಭವಿಸಬಲ್ಲವು. ಈ ಮಾನಸಿಕ ಕ್ರಿಯೆಗಳು ಸಸ್ಯಗಳಲ್ಲಿಗಿಂತ ಹೆಚ್ಚಾಗಿ ಪ್ರಾಣಿಗಳಲ್ಲಿ ನಮಗೆ ಸ್ಪಷ್ಟವಾಗಿ ಗೋಚರವಾಗುತ್ತವೆ. ವಿಶೇಷವಾಗಿ ಉನ್ನತ ವರ್ಗದ ಪ್ರಾಣಿಗಳಲ್ಲಿ ಅಹಂಭಾವ ಇರುವಂತೆ ಕಂಡುಬರುತ್ತದೆ. ಅವುಗಳಲ್ಲಿ 'ತನ್ನದು' ಎಂಬ ಭಾವ ಇರುತ್ತದೆ. ಇದು ತನ್ನ ಜಾಗ, ಇದು ತನ್ನ ಗೂಡು, ಇವು ತನ್ನ ಮರಿಗಳು ಎಂಬ ಪ್ರಜ್ಞೆ ಇರುತ್ತದೆ. ಆದರೆ 'ತಾನು' ಎಂಬ ಪ್ರಜ್ಞೆ ಇರುವುದಿಲ್ಲ. ಅವುಗಳಲ್ಲಿ ತಮ್ಮ ಅರಿವು ಅಥವಾ ಆತ್ಮಪ್ರಜ್ಞೆ (*self-awareness*) ಇರುವುದಿಲ್ಲ. ಓರ್ವ ತತ್ತ್ವಜ್ಞಾನಿಯು, ಜಗತ್ತಿನಲ್ಲಿರುವ ಸಿಂಹ, ಹುಲಿ ಮುಂತಾದ ಕ್ರೂರ ಮತ್ತು ಶಕ್ತಿಯುತ ಪ್ರಾಣಿಗಳು ಆತ್ಮಪ್ರಜ್ಞೆಯನ್ನು ಪಡೆದರೆ ಏನಾಗುತ್ತದೆ ಎಂಬ ಪ್ರಶ್ನೆಯನ್ನು ಹಾಕಿ, ಅದರ ಉತ್ತರ ಹೇಳುವುದಕ್ಕೆ ನಾವಾರೂ ಇರುವುದೇ ಇಲ್ಲ ಎಂದು ಹೇಳುತ್ತಾನೆ. ಆ ಪ್ರಾಣಿಗಳಿಗೆ ಆತ್ಮಪ್ರಜ್ಞೆ ಉಂಟಾದರೆ ತಮ್ಮ ಶಕ್ತಿಯ ಅರಿವಾಗಿ ಮನುಷ್ಯರನ್ನೆಲ್ಲ ನಿರ್ನಾಮ ಮಾಡಿಬಿಡುತ್ತವೆ. ಮಾನವನು ಭೌತಿಕವಾಗಿ ಎಷ್ಟೇ ದುರ್ಬಲನಾದರೂ ಆತ್ಮ-ಪ್ರಜ್ಞೆಯ ಬಲದಿಂದಾಗಿ ಇಡೀ ಸೃಷ್ಟಿಯನ್ನು ಆಳುತ್ತಿರುವನು. ಇದೇ ಬಲದಿಂದಲೇ ಅವನು ತನ್ನನ್ನು ಉತ್ತಮ ಪಡಿಸಿಕೊಂಡು ದೇವತೆಯಾಗಿ ವಿಕಾಸ ಹೊಂದುತ್ತಾನೆ. ಆದ್ದರಿಂದ ಅಹಂಪ್ರತ್ಯಯವು ಪ್ರಜ್ಞೆಯ ವಿಕಾಸವನ್ನು ಅವಲಂಬಿಸಿದೆ. ಭೌತವಸ್ತುಗಳಲ್ಲಿ ಪ್ರಜ್ಞೆ (*consciousness*) ಸುಪ್ತವಾಗಿರುತ್ತದೆ. ಸಸ್ಯ ಮತ್ತು ಪ್ರಾಣಿಗಳಲ್ಲಿ ಅದು ಜೀವಶಕ್ತಿಯಾಗಿ ಅಭಿವ್ಯಕ್ತವಾಗುತ್ತದೆ. ಮಾನವನಲ್ಲಿ ಅದು ಅಹಂಪ್ರತ್ಯಯವಾಗಿ ವಿಕಾಸ ಹೊಂದುತ್ತದೆ.

> **ನಮ್ಮ ಅರಿವಿನ ಅರಿವು ನಮಗಿದೆ. ನಾವು ತಿಳಿದಿರುವುದು ಮಾತ್ರವಲ್ಲದೆ ನಾವು ತಿಳಿದಿರುವೆವೆಂಬ ತಿಳಿವಳಿಕೆಯೂ ಇದೆ. ಈ ವಿಶೇಷ ವೃತ್ತಿಯೇ ಆತ್ಮಪ್ರಜ್ಞೆ.**
>
> —ಫ್ರಿಟ್ಜಾಫ್ ಕಾಪ್ರ (Fritjof Capra)

ಮಾನವನಲ್ಲಿಯೂ ಈ ಅಹಂಪ್ರತ್ಯಯವು ಕ್ರಮೇಣ ಬೆಳವಣಿಗೆಯನ್ನು ಹೊಂದುತ್ತದೆ. ಚಿಕ್ಕಮಕ್ಕಳಲ್ಲಿ ಅದು ಇನ್ನೂ ಸುಪ್ತಾವಸ್ಥೆಯಲ್ಲಿಯೇ ಇರುತ್ತದೆ. ಚಿಕ್ಕಮಕ್ಕಳು ಪರಿಸರದೊಡನೆ ತಮ್ಮನ್ನು ಒಂದಾಗಿಸಿಕೊಳ್ಳುತ್ತಾರೆ, ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಭಾವಿಸುವುದಿಲ್ಲ. ಆದ್ದರಿಂದಲೇ ಬೈದಾಗ, ಹೊಡೆದಾಗ ಅವರು ಅಷ್ಟಾಗಿ ನೊಂದುಕೊಳ್ಳುವುದಿಲ್ಲ. ಆ ಸಂದರ್ಭದಲ್ಲಿ ಅವರು ಅಳುವುದು ಒಂದು ಯಾಂತ್ರಿಕ ಕ್ರಿಯೆಯೇ ಹೊರತು ಅಹಂಕಾರದ ಪ್ರತಿಕ್ರಿಯೆಯಲ್ಲ. ಆದ್ದರಿಂದಲೇ ಅವರು ಬೈದಿದ್ದನ್ನು ಅಥವಾ ಹೊಡೆದಿದ್ದನ್ನು ಬೇಗನೇ ಮರೆತುಬಿಡುತ್ತಾರೆ. ಅವರು ಬೆಳೆದಂತೆಲ್ಲ ಅಹಂಪ್ರತ್ಯಯವೂ ಬೆಳೆಯುತ್ತದೆ. ಬಾಲ್ಯಾವಸ್ಥೆಯನ್ನು ಕಳೆದು ಕೌಮಾರಾವಸ್ಥೆಯನ್ನು ತಲುಪುವ ಹೊತ್ತಿಗೆ ಅವರ ಅಹಂಪ್ರತ್ಯಯ ಸಾಕಷ್ಟು ಬೆಳೆದಿರುತ್ತದೆ. ಆಗ ಅವರನ್ನು ಬೈದರೆ ಕೋಪಿಸಿಕೊಳ್ಳುತ್ತಾರೆ, ಸಾಮಾನ್ಯವಾಗಿ ಹಿರಿಯರ ಹತೋಟಿಗೆ ಒಳಗಾಗುವುದಿಲ್ಲ, ತಮ್ಮ ವೇಶಭೂಷಣಗಳ ಕಡೆ ಹೆಚ್ಚು ಗಮನ ಹರಿಸುತ್ತಾರೆ ಮತ್ತು ಆಗಾಗ ಕನ್ನಡಿಯಲ್ಲಿ ತಮ್ಮನ್ನು ನೋಡಿಕೊಳ್ಳುತ್ತಾರೆ. ಯುವಕರು ಬಹುಬೇಗನೆ ಪ್ರಚೋದಿತರಾಗುತ್ತಾರೆ, ತಮ್ಮ ಸುತ್ತಲೂ ನಡೆಯುವ ವಿವಿಧ ಘಟನೆಗಳಿಗೆಲ್ಲ ಸಕಾರಾತ್ಮಕ ಅಥವಾ ನಕಾರಾತ್ಮಕ ಪ್ರತಿಕ್ರಿಯೆಯನ್ನು ತೋರಿಸುತ್ತಾರೆ. ಹೀಗೆ ಮಾನವನು ಬೆಳೆದು ಪ್ರಬುದ್ಧಾವಸ್ಥೆಯನ್ನು ಮುಟ್ಟಿದಾಗ ಅಹಂಪ್ರತ್ಯಯವೂ ಪರಿಪಕ್ವವಾಗಬೇಕು. ಆದರೆ ಅನೇಕರು ಭೌತಿಕವಾಗಿ ಪ್ರೌಢಾವಸ್ಥೆಯನ್ನು ತಲುಪಿದ್ದರೂ ಅವರ ಅಹಂಪ್ರತ್ಯಯವು ಇನ್ನೂ ಕೌಮಾರಾವಸ್ಥೆಯಲ್ಲಿಯೋ ಬಾಲ್ಯಾವಸ್ಥೆಯಲ್ಲಿಯೋ ಇರುತ್ತದೆ. ಪಕ್ವ ಅಹಂಕಾರವನ್ನು ತುಂಬಿದ ಕೊಡಕ್ಕೂ, ಅಪಕ್ವ ಅಹಂಕಾರವನ್ನು ಅರೆತುಂಬಿದ ಕೊಡಕ್ಕೂ ಹೋಲಿಸಬಹುದು.

## ಅಹಂಪ್ರತ್ಯಯ ಮತ್ತು ಅಹಂಕಾರ

ನಾವು ಯಾವುದನ್ನು ಸಾಮಾನ್ಯವಾಗಿ ಅಹಂಕಾರ ಎಂದು ಕರೆಯುತ್ತೇವೆಯೊ ಅದಕ್ಕೂ ಅಹಂಪ್ರತ್ಯಯಕ್ಕೂ ಇರುವ ವ್ಯತ್ಯಾಸವನ್ನು ನೋಡೋಣ. ದಂಭ, ದರ್ಪ, ಅಭಿಮಾನ—ಇವೆಲ್ಲವೂ ಅಹಂಕಾರದ ವಿವಿಧ ಪ್ರಭೇದಗಳು. ಇದನ್ನೇ 'ಮದ' ಎಂಬ ಹೆಸರಿನಲ್ಲಿ ಅರಿಷಡ್ವರ್ಗದಲ್ಲಿ (ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರ) ಸೇರಿಸಲಾಗಿದೆ. ಅಹಂಪ್ರತ್ಯಯವು ನಮ್ಮ ವ್ಯಕ್ತಿತ್ವದ ಪ್ರಧಾನ ಘಟಕಗಳಲ್ಲಿ ಒಂದು. ಅದು ನಮ್ಮ ವ್ಯಕ್ತಿತ್ವದಲ್ಲಿ ನಡೆಯುವ ಎಲ್ಲ ಆಗುಹೋಗುಗಳನ್ನು ಸಂಘಟಿಸುವ ತತ್ತ್ವ. ನಮ್ಮಲ್ಲಿ ನೋಡುವ, ಕೇಳುವ, ನಡೆಯುವ, ಮಾತನಾಡುವ, ಚಿಂತಿಸುವ—ಹೀಗೆ ಅನೇಕ ಕ್ರಿಯೆಗಳು ನಡೆಯುತ್ತಿರುತ್ತವೆ. ಇವುಗಳನ್ನೆಲ್ಲ 'ನಾನೇ' ಮಾಡುವವನು ಎಂಬ ಅಹಂಪ್ರತ್ಯಯ ಇವುಗಳೆಲ್ಲದರ ಹಿಂದೆ ಏಕಪ್ರಕಾರವಾಗಿದೆ. ನೋಡುವವನು ಬೇರೆ, ಕೇಳುವವನು ಬೇರೆ ಅಥವಾ ಚಿಂತಿಸುವವನು ಬೇರೆ ಅಲ್ಲ. ಇತರರು ನೋಡುವಾಗ, ಕೇಳುವಾಗ ಅಥವಾ ಚಿಂತಿಸುವಾಗ ಅವನ್ನು 'ನಾನು' ಮಾಡುತ್ತಿದ್ದೇನೆ ಎಂಬ ಭಾವ ನಮಗಿರುವುದಿಲ್ಲ. ಆದ್ದರಿಂದ ಈ ಅಹಂಪ್ರತ್ಯಯವು ಪ್ರತಿಯೊಬ್ಬರ ವ್ಯಕ್ತಿತ್ವಕ್ಕೆ ಒಂದು ತನ್ನತನವನ್ನು ನೀಡುತ್ತದೆ. ಈ ವ್ಯಕ್ತಿಭಾವ ನಮ್ಮಲ್ಲಿ ಎಷ್ಟು ಶಕ್ತಿಯುತವಾಗಿರುತ್ತದೊ ಅಷ್ಟರಮಟ್ಟಿಗೆ ನಮ್ಮ ವ್ಯಕ್ತಿತ್ವವೂ ಸಮರ್ಥವಾಗಿರುತ್ತದೆ. ಈ ವ್ಯಕ್ತಿಭಾವವು ದುರ್ಬಲವಾದಷ್ಟೂ ವ್ಯಕ್ತಿತ್ವ ತನ್ನ ಸಮತೋಲವನ್ನು ಕಳೆದುಕೊಳ್ಳುತ್ತದೆ. ಈ ಸ್ಥಿತಿಯ ತೀವ್ರಾವಸ್ಥೆಯನ್ನೇ ಹುಚ್ಚು ಎಂದು ಕರೆಯುವುದು. ಹುಚ್ಚು ಹಿಡಿದಿರುವವನಿಗೆ ತಾನು ಏನು ಮಾಡುತ್ತಿರುವೆನೆಂಬ ಅರಿವಿರುವುದಿಲ್ಲ. ತಾನು ಹುಚ್ಚ ಎಂದು ಅವನು ಭಾವಿಸುವುದೇ ಇಲ್ಲ. ಅವನಲ್ಲಿ ಅಹಂಪ್ರತ್ಯಯವು ಅವನ ಎಲ್ಲ ಕ್ರಿಯೆಗಳ ಸಂಬಂಧವನ್ನು ಕಳೆದುಕೊಂಡಿರುತ್ತದೆ. ಆದ್ದರಿಂದ ಅವನಿಗೆ ತನ್ನ ಯಾವ ಕ್ರಿಯೆಗಳ ಮೇಲೂ ನಿಯಂತ್ರಣವಿರುವುದಿಲ್ಲ. ಅವನ ವ್ಯಕ್ತಿತ್ವದ ಬೇರೆ ಬೇರೆ ಭಾಗಗಳಲ್ಲಿ ಪರಸ್ಪರ ಸಂಬಂಧವಿರುವುದಿಲ್ಲ. ಅಂದರೆ ಅವನ ವ್ಯಕ್ತಿತ್ವ ತನ್ನ ಪೂರ್ಣತೆಯನ್ನು ಕಳೆದುಕೊಂಡಿರುತ್ತದೆ. ಆದ್ದರಿಂದ ವ್ಯಕ್ತಿತ್ವಕ್ಕೆ ಒಂದು

ಪೂರ್ಣತೆಯನ್ನು ಕೊಡುವ ಅಂಶವನ್ನೇ ನಾವು ಅಹಂಪ್ರತ್ಯಯ ಎಂದು ಕರೆಯುವುದು. ಇದನ್ನೇ ಜೀವಾತ್ಮ ಎಂದೂ ಕರೆಯಲಾಗಿದೆ.

ಈ ಅಹಂಪ್ರತ್ಯಯಕ್ಕೂ ಅಹಂಕಾರಕ್ಕೂ ಇರುವ ವ್ಯತ್ಯಾಸವನ್ನು ಒಂದು ದೃಷ್ಟಾಂತದ ಮೂಲಕ ವಿವರಿಸಬಹುದು. ನಾನು ನೆಲ ಗುಡಿಸಿಯಾದಮೇಲೆ ಯಾರಾದರೂ ಬಂದು 'ಯಾರು ಗುಡಿಸಿದರು' ಎಂದು ಕೇಳಿದರೆ 'ನಾನು ಗುಡಿಸಿದವ'ನೆಂದು ಹೆಮ್ಮೆಯ ಭಾವವಿಲ್ಲದೆ ಹೇಳುತ್ತೇನೆ. ಕಸಗುಡಿಸುವುದು ಒಂದು ಸಾಮಾನ್ಯ ಕೆಲಸವಾದ್ದರಿಂದ ಅಲ್ಲಿ ಹೆಮ್ಮೆಗೆ ಅವಕಾಶವಿರುವುದಿಲ್ಲ. ಇಲ್ಲಿ 'ನಾನು ಮಾಡಿದೆ' ಎಂಬ ಅಹಂಪ್ರತ್ಯಯ ಮಾತ್ರ ಇರುತ್ತದೆ. ನಾನು ಒಂದು ಸುಂದರವಾದ ಕವನವನ್ನು ರಚಿಸುತ್ತೇನೆಂದು ಇಟ್ಟುಕೊಳ್ಳೋಣ. ಯಾರೂ ಅದನ್ನು ಓದಿ ಮೆಚ್ಚುಗೆಯಿಂದ 'ಇದನ್ನು ಯಾರು ರಚಿಸಿದವರು?' ಎಂದು ಕೇಳಿದರೆ, ಆಗ 'ನಾನು ರಚಿಸಿದವನು' ಎಂದು ಎದೆಯ ಮೇಲೆ ಕೈಯಿಟ್ಟು ಮಂದಹಾಸವನ್ನು ಬೀರುತ್ತ ಹೇಳುತ್ತೇನೆ. ಇಲ್ಲಿ ಹೆಮ್ಮೆಯ ಭಾವವಿದೆ—ಇದನ್ನೇ ಅಹಂಕಾರವೆನ್ನುವುದು. ಇಲ್ಲಿ ಅಹಂಕಾರ ಒಂದು ಭಾವ (*emotion*)ವಾಗಿದೆ, ಭಾವನಾತ್ಮಕ ಪ್ರತಿಕ್ರಿಯೆಯಾಗಿದೆ. ಇದು ತೀವ್ರವಾದಾಗ ದಂಭ ದರ್ಪಾದಿ ರೂಪವನ್ನು ಪಡೆಯುತ್ತದೆ. ಇದೇ ಅರಿಷಡ್ವರ್ಗದಲ್ಲಿ ಒಂದಾಗಿರುವುದು. ದಂಭ ದರ್ಪಾದಿ ಭಾವಗಳಿಲ್ಲದೆ ನಾನು ಮಾಡಿರುವುದನ್ನು ಅಥವಾ ಪಡೆದಿರುವುದನ್ನು ಒಪ್ಪಿಕೊಂಡರೆ ದೋಷವಿಲ್ಲ.

## ಅಹಂಪ್ರತ್ಯಯದ ಪ್ರೌಢಾವಸ್ಥೆ

ನಮ್ಮ ವ್ಯಕ್ತಿತ್ವಕ್ಕೆ ತನ್ನತನವನ್ನು ನೀಡುವ ಈ ಅಹಂಪ್ರತ್ಯಯವನ್ನು ಇತರರೊಂದಿಗೆ ಅರ್ಥಪೂರ್ಣ ಸಂಬಂಧದೊಡನೆ ಅರ್ಥಪೂರ್ಣ ಜೀವನವನ್ನು ನಡೆಸುತ್ತಾ ನಾವು ಹೆಚ್ಚು ಹೆಚ್ಚು ಬೆಳಸಿಕೊಳ್ಳಬೇಕು. ಇಲ್ಲದಿದ್ದರೆ ಅಪಕ್ವ ಅಹಂಪ್ರತ್ಯಯವು ಅನೇಕ ರೀತಿಯಲ್ಲಿ ವ್ಯಕ್ತಿಗೆ ತೊಂದರೆಯನ್ನು ಉಂಟುಮಾಡುತ್ತ ಬಾಹ್ಯ ವ್ಯಕ್ತಿಗಳಿಗೆ ಮತ್ತು ಸನ್ನಿವೇಶಗಳಿಗೆ ಅಧೀನನಾಗಿ ಬಾಳುವಂತೆ ಮಾಡುತ್ತದೆ. ವ್ಯಕ್ತಿಯು ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ತಾನೇ ತಾನಾಗಿ ಬಾಳುವಂತಾಗಬೇಕು, ಅದೇ ಸಂದರ್ಭದಲ್ಲಿ ಇತರರೊಡನೆ ಆರೋಗ್ಯಕರವಾದ ಸಂಬಂಧವನ್ನೂ ಹೊಂದಿರಬೇಕು. ಇದು ಪಕ್ವ ಅಹಂಪ್ರತ್ಯಯದ ಚಿಹ್ನೆ.

ಸ್ಟೀಫನ್ ಕೋವೆ (Stephen R. Covey) ಎಂಬ ಮನಶ್ಶಾಸ್ತ್ರಜ್ಞರು ವ್ಯಕ್ತಿಯ ಬೆಳವಣಿಗೆಯ ಮೂರು ಹಂತವನ್ನು ಗುರುತಿಸುತ್ತಾರೆ: ಪರಾವಲಂಬನೆ (*dependence*), ಸ್ವಾವಲಂಬನೆ (*indepe-ndence*), ಮತ್ತು ಪರಸ್ಪರಾವಲಂಬನೆ (*inter-dependence*). ಮಗುವು ಸಂಪೂರ್ಣ ಭೌತಿಕ ಮತ್ತು ಮಾನಸಿಕವಾಗಿ ಪರಾವಲಂಬಿಯಾಗಿರುತ್ತದೆ. ಕಾರಣ ಅದರಲ್ಲಿ ಇನ್ನೂ ವ್ಯಕ್ತಿಭಾವ ಜಾಗೃತವಾಗಿರುವುದಿಲ್ಲ. ವ್ಯಕ್ತಿಭಾವವು ಬೆಳೆದಂತೆಲ್ಲ ಅದು ಹೆಚ್ಚು ಹೆಚ್ಚು ಸ್ವತಂತ್ರವಾಗುತ್ತದೆ—ಭೌತಿಕವಾಗಿ ಮಾತ್ರವಲ್ಲ ಮಾನಸಿಕವಾಗಿಯೂ. ಇದು ಸ್ವಾವಲಂಬನೆಯ ಹಂತ. ಇಲ್ಲಿ ವ್ಯಕ್ತಿಯು ಇತರರ ಪ್ರೀತಿ, ಸಹಾನುಭೂತಿ, ಪ್ರಶಂಸೆ ಇತ್ಯಾದಿಗಳನ್ನು ಆವಶ್ಯಕತೆಗೆ ಮೀರಿ ಬಯಸದೆ ತಾನೇ ತಾನಾಗಿ ಇರುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಮುಂದಿನ ಪರಸ್ಪರಾವಲಂಬನೆಯ ಹಂತದಲ್ಲಿ ಅವನು ಸಮಾಜವೆಂದರೆ ಪರಸ್ಪರಾವಲಂಬನೆಯಿಂದ ಕೂಡಿದುದು, ಪರಸ್ಪರ ಪ್ರೀತಿ ಸಹಕಾರಗಳೇ ಸಮಾಜದ ತಳಹದಿ ಎಂಬ ಅರಿವನ್ನು ಪಡೆಯುತ್ತಾನೆ (ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ—ಪರಸ್ಪರ ಪ್ರೀತಿ ಸಹಕಾರಗಳ ಮೂಲಕ ಪರಮಶ್ರೇಯಸ್ಸನ್ನು ಪಡೆಯಿರಿ– ಭಗವದ್ಗೀತೆ). ಈ ಹಂತದಲ್ಲಿ ವ್ಯಕ್ತಿಯು ಸ್ವತಂತ್ರನಾಗಿಯೂ ಇದ್ದು ಸಮಾಜದ ಅಂಗವಾಗಿ ತನ್ನ ಜವಾಬ್ದಾರಿಯನ್ನೂ ಅರಿತು ಪ್ರೌಢ ವ್ಯಕ್ತಿಯಾಗಿ ಬಾಳುತ್ತಾನೆ. ಈ ಸ್ಥಿತಿಯನ್ನು ಪಾಲ್ ತಿಲಿಚ್ (*Paul Tillich*) ಎಂಬ ಚಿಂತಕರು 'ತಾನೇ ತಾನಾಗಿ ಇರುವ ಧೈರ್ಯ (*Courage to be*)' ಎಂದು ಕರೆಯುತ್ತಾರೆ.

> ಇತರ ವ್ಯಕ್ತಿಗಳೊಡನೆ ಭಾವವಿನಿಮಯದಿಂದ ಮಾತ್ರವೇ ವ್ಯಕ್ತಿಯು ವ್ಯಕ್ತಿಯಾಗಿ ಉಳಿಯುತ್ತಾನೆ.
>
> —ಪಾಲ್ ತಿಲಿಚ್ (*Paul Tillich*)

ಈ ಧೈರ್ಯ ನಿಜವಾಗಿಯೂ ಅಪರೂಪವಾದುದು. ಅನೇಕರು ಇತರರಂತೆ ಇರಲು,ಆಗಲು, ಮತ್ತು ಇತರರು ಬಯಸಿದಂತೆ ವರ್ತಿಸಲು ಬಯಸುತ್ತಾರೆ. 'ತಿಳಿದೊ ತಿಳಿಯದೆಯೊ ನಾವೆಲ್ಲರೂ ಈ ಜೀವನದಲ್ಲಿ ಪಾತ್ರಧಾರಿಗಳಾಗಿದ್ದೇವೆ, ಪ್ರೇಕ್ಷಕರು ಬಯಸಿದಂತೆ ಅಭಿನಯಿಸುತ್ತೇವೆ' (Lin Yutang, *Importance of Living*). ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕು.ಸ್ವಾಮಿ ವಿವೇಕಾನಂದರು ಇದಕ್ಕೆ ಹೆಚ್ಚು ಪ್ರಾಮುಖ್ಯವನ್ನು ನೀಡುತ್ತಾರೆ. ಅವರು ಹೇಳುತ್ತಾರೆ : "ವ್ಯಕ್ತಿತ್ವ ನಿರ್ಮಾಣವೇ ನನ್ನ ಗುರಿ. ವ್ಯಕ್ತಿಗಳನ್ನು ತರಬೇತಿ ಮಾಡುವುದಕ್ಕಿಂತ ಹೆಚ್ಚಿನ ಮಹತ್ವಾಕಾಂಕ್ಷೆ ನನ್ನಲ್ಲಿಲ್ಲ." ಪರಾವಲಂಬಿಗಳಾಗದೆ, ಪರಾನುಕರಣೆ ಇಲ್ಲದೆ, ತಾನೇ ತಾನಾಗಿ ಇರುತ್ತ, ಇತರರನ್ನು ಪ್ರೀತಿಸುತ್ತ ಮತ್ತು ಸಮಾಜಕ್ಕೆ ತನ್ನ ಸೇವೆಯನ್ನು ಸಲ್ಲಿಸುತ್ತ ಬಾಳುವ ವ್ಯಕ್ತಿಗಳನ್ನು ತಯಾರು ಮಾಡುವುದೇ ವಿವೇಕಾನಂದರ ಗುರಿಯಾಗಿತ್ತು.

## ವ್ಯಕ್ತಿವೈಶಿಷ್ಟ್ಯ

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ತನ್ನದೇ ಆದ ವೈಶಿಷ್ಟ್ಯವಿರುತ್ತದೆ, ಹಾಗು ಅದಕ್ಕೆ ಅನುಗುಣವಾಗಿ ಸಮಾಜದಲ್ಲಿ ತನ್ನದೇ ಆದ ಪಾತ್ರವಿರುತ್ತದೆ. ಇದನ್ನು ಅವನು ಉಳಿಸಿಕೊಳ್ಳಬೇಕು ಮತ್ತು ಇತರರಂತಾಗಲು ಅವನು ಬಯಸಬಾರದು. ಇತರರಿಂದ ಅವನು ಕಲಿಯಬೇಕು, ಆದರೆ ಅದನ್ನು ಅವನು ತನ್ನದಾಗಿಸಿಕೊಳ್ಳಬೇಕು. "ಪ್ರತಿಯೊಬ್ಬ ಮಾನವನೂ ಹಿಂದೆ ಎಂದೂ ಹುಟ್ಟಿರದ ಒಬ್ಬ ಹೊಸ ವ್ಯಕ್ತಿಯಾಗಿಯೆ ಹುಟ್ಟುತ್ತಾನೆ " ಎಂದು ಹೇಳುತ್ತಾರೆ ಮ್ಯುರೀಲ್ ಜೇಮ್ಸ್ ಮತ್ತು ಡೊರೊತಿ ಜಾಂಗ್‌ವಾರ್ಡ್ (Muriel James and Dorothy Jongeward, *Born to Win*, P.1). ಪ್ರತಿಯೊಬ್ಬ ವ್ಯಕ್ತಿಯೂ ನೋಡುವ, ಕೇಳುವ ವಿಧಾನ, ಆಲೋಚನಾ ರೀತಿ, ಅವನಲ್ಲಿರುವ ಅಂತಃಸತ್ವ ಮತ್ತು ಅವನ ಸಾಮರ್ಥ್ಯ ಬೇರೆಯಾಗಿರುತ್ತವೆ. ಈ ವೈಶಿಷ್ಟ್ಯಕ್ಕನುಗುಣವಾಗಿ

ಅವನು ಬಾಳಬೇಕು ಮತ್ತು ಸಮಾಜದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಬೇಕು. ಇತರರಂತಾಗುವ ಜನರ ಪ್ರವೃತ್ತಿಯನ್ನು ಕುರಿತು ಫ್ರೆಡರಿಕ್ ಪೆರ್ಲ್ಸ್ (Frederick Perls) ಹಾಸ್ಯಮಯವಾಗಿ ಹೀಗೆ ಹೇಳುತ್ತಾರೆ :"ಹುಚ್ಚನು ಹೇಳುತ್ತಾನೆ, 'ನಾನು ಅಬ್ರಹಾಂ ಲಿಂಕನ್' ಎಂದು. ಮನೋರೋಗಿಯು ಹೇಳುತ್ತಾನೆ, 'ನಾನು ಅಬ್ರಹಾಂ ಲಿಂಕನ್ ಆಗಿದ್ದರೆ ಚೆನ್ನಾಗಿತ್ತು' ಎಂದು. ಆರೋಗ್ಯವಂತ ವ್ಯಕ್ತಿಯು ಹೇಳುತ್ತಾನೆ, 'ನಾನು ನಾನೇ, ನೀನು ನೀನೇ' ಎಂದು."

ಈ ರೀತಿ ಪ್ರೌಢಾವಸ್ಥೆಯನ್ನು ತಲುಪಿರದ ಅಹಂಪ್ರತ್ಯಯವು ಅನೇಕ ವಿಕೃತ ರೂಪಗಳಲ್ಲಿ ತೋರಿಕೊಳ್ಳುತ್ತದೆ. ನಮ್ಮ ದೈನಂದಿನ ಕೆಲಸಕಾರ್ಯಗಳಲ್ಲಿ, ಮಾತು ವರ್ತನೆಗಳಲ್ಲಿ ಅದು ಹೇಗೆ ತೋರಿಕೊಳ್ಳುತ್ತದೆ ಎಂಬುದನ್ನು ಅರಿಯುವುದು ನಮ್ಮನ್ನು ನಾವು ಸರಿಪಡಿಸಿಕೊಳ್ಳಲು ಸಹಾಯಕವಾಗುತ್ತದೆ. ಇದರ ವಿವಿಧ ರೂಪಗಳನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

❋

## ಕೋಣ ಬಲಿಯಾಗಬೇಕು

ಒಬ್ಬ ರೈತನ ಬಳಿ ಒಂದು ಕೋಣ ಮತ್ತು ಎಂಟು ಎಮ್ಮೆಗಳಿದ್ದವು. ಅರ್ಧರಾತ್ರಿಯ ಸಮಯದಲ್ಲಿ ಕಳ್ಳರು ಬಂದು ಅವುಗಳನ್ನು ಸದ್ದಿಲ್ಲದೆ ಹೊಡೆದುಕೊಂಡು ಹೋದರು. ಅವರು ಹೋಗುತ್ತಿದ್ದ ಹಾದಿಯಲ್ಲಿ ಪೋಲೇರಮ್ಮನ ದೇವಾಲಯವಿತ್ತು. ಆ ದೇವತೆಯೆಂದರೆ ಆ ಪ್ರಾಂತ್ಯದ ಜನಕ್ಕೆಲ್ಲ ಬಹಳ ಭಯಭಕ್ತಿ. ತುಂಬ ಶಕ್ತಿಶಾಲಿ ದೇವತೆಯೆಂಬ ನಂಬಿಕೆ. ಆ ಕಳ್ಳರು 'ಅಮ್ಮಾ! ನಮ್ಮ ಕಳ್ಳತನ ಬಯಲಾಗದಿದ್ದರೆ ಈ ಕೋಣವನ್ನು ನಿನಗೆ ಬಲಿಕೊಡುತ್ತೇವೆ' ಎಂದು ಹರಕೆ ಹೊತ್ತರು.

ಇತ್ತ ರೈತನು ಬೆಳಗೆದ್ದು ನೋಡುತ್ತಾನೆ, ಅವನ ಪಶುಗಳೆಲ್ಲ ಮಾಯವಾಗಿವೆ. ಸರಿ ಅವನು ನೇರವಾಗಿ ಪೋಲೇರಮ್ಮನ ಗುಡಿಗೆ ಹೋಗಿ 'ತಾಯಿ! ಕಾಣೆಯಾದ ಕೋಣ ಹಾಗೂ ಎಮ್ಮೆಗಳೆಲ್ಲ ನನಗೆ ಸಿಗುವಂತೆ ನೀನು ಮಾಡುವುದಾದರೆ ಕೋಣವನ್ನು ನಿನಗೆ ಬಲಿಕೊಡುತ್ತೇನೆ' ಎಂದು ಬೇಡಿಕೊಂಡ.

ಒಟ್ಟಿನಲ್ಲಿ ಕೋಣ ಬಲಿಯಾಗಬೇಕು. ಎಂಟು ಎಮ್ಮೆಗಳೆಂದರೆ ಪಂಚ ಜ್ಞಾನೇಂದ್ರಿಯಗಳು ,ಮನಸ್ಸು, ಬುದ್ಧಿ ಮತ್ತು ಚಿತ್ತ. ಕೋಣವೆಂದರೆ ಅಹಂಕಾರ. ಎಮ್ಮೆಗಳಿದ್ದರೆ ಪರವಾಗಿಲ್ಲ. ಆದರೆ ಕೋಣ ಮಾತ್ರ ಸಾಯಬೇಕು.

(ಸಂಗ್ರಹ : ಭಕ್ತಿ ಸೌರಭ, ತೆಲುಗು ಮೂಲದ ಕನ್ನಡಾನುವಾದ : ಎಂ. ಆರ್. ವಿಶ್ವನಾಥ ರೆಡ್ಡಿ)

# ಪಂಚದಶಿಯಲ್ಲಿ ನಾಟಕದೀಪ

ಸ್ವಾಮಿ ರಾಮಾನುಜಾನಂದ

ಪಂಚದಶಿಯಲ್ಲಿ ಬರುವ ನಾಟಕ ದೀಪವೆಂಬ ರೂಪಕವು ಅತ್ಯಂತ ಪ್ರಸಿದ್ಧವಾದುದು. ಇದರ ಮೂಲಕ ಆತ್ಮತತ್ತ್ವವನ್ನು ಮನ ಮುಟ್ಟುವಂತೆ ವಿವರಿಸಲಾಗಿದೆ. ಈ ಲೇಖನದ ಮೂಲಕ ಅದರ ಪರಿಚಯವನ್ನು ನೀಡಿರುವ ಸ್ವಾಮಿ ರಾಮಾನುಜಾನಂದರು ಕೇರಳದ ತಿರುವಲ್ಲದಲ್ಲಿರುವ ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

---

**ಮಾನವನಿಗೆ** ತಾನು ಇತರ ಪ್ರಾಣಿಗಳಿಗಿಂತ ಶ್ರೇಷ್ಠನೆಂಬ ಹೆಮ್ಮೆ ಇದೆ; ಇದು ಸ್ವಾಭಾವಿಕ. ಆದರೆ, ಆ ಹೆಮ್ಮೆಗೆ ಅರ್ಹನಾಗಬೇಕಾದರೆ, ಅವನು ನಿಜವಾಗಿಯೂ ಮನುಷ್ಯನಾಗಿರಬೇಕು. ಹಾಗಾದರೆ ನಿಜವಾದ ಮನುಷ್ಯನು ಯಾರು? ನಿಜವಾದ ಮನುಷ್ಯನೆಂದರೆ, ತಾನು ಯಾರೆಂದು ತಿಳಿದುಕೊಂಡ ವ್ಯಕ್ತಿ. ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ, ಮನುಷ್ಯ ತನ್ನನ್ನು ತಾನು ತಿಳಿಯಬಲ್ಲ, ತನ್ನ ಬಗ್ಗೆ ಆಲೋಚಿಸಬಲ್ಲ—ವಸ್ತುಪ್ರಜ್ಞೆಯ ಜೊತೆಗೆ ವ್ಯಕ್ತಿಪ್ರಜ್ಞೆಯೂ ಅವನಲ್ಲಿದೆ. ಬೇರೆ ಪ್ರಾಣಿಗಳಿಗೆ ಈ ಶಕ್ತಿಯಿಲ್ಲ.

ನಾವು ಈ ಜಗತ್ತಿನ ರಚನೆಯನ್ನು ನೋಡಿದಾಗ, ಆಶ್ಚರ್ಯ ಚಕಿತರಾಗುತ್ತೇವೆ. ಆ ಸೃಷ್ಟಿಕರ್ತನ ಚಮತ್ಕಾರ ಕಂಡು ಬೆರಗಾಗುತ್ತೇವೆ. ಈ ಸೃಷ್ಟಿಯ ರಹಸ್ಯವೇನು? ಈ ಸೃಷ್ಟಿಯ ಹಿಂದೆ ಯಾವುದಾದರೂ ಶಕ್ತಿ ಕೆಲಸ ಮಾಡುತ್ತಿದೆಯೆ? ಇತ್ಯಾದಿ ಪ್ರಶ್ನೆಗಳು ಏಳುತ್ತವೆ. ಇವಕ್ಕಿಂತ ಮುಖ್ಯವಾದುವು ಮಾನವನಿಗೆ ತನ್ನ ಬಗ್ಗೆಯೆ ಏಳುವ ಪ್ರಶ್ನೆಗಳು. ಮನುಷ್ಯನ ಅಸ್ತಿತ್ವದ ಅರ್ಥವೇನು? ಅವನ ನಿಜವಾದ ಸ್ವರೂಪವೇನು? ಹೀಗೆ ಹಲವಾರು ಪ್ರಶ್ನೆಗಳು ಬರುತ್ತವೆ. ಹೀಗೆ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುವ ಸಾಮರ್ಥ್ಯವೇ ನಿಜವಾದ ಮನುಷ್ಯತ್ವ.